**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ ಎಸ್‌ವೈಎನ್/ಎಸ್1/169/2023-24

ಜ್ಞಾನ ಭಾರತಿ
ಬೆಂಗಳೂರು-560 056
ದಿನಾಂಕ 07 08 2023

ಸಿಂಡಿಕೇಟ್ ಸದಸ್ಯರು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056

ಮಾನ್ಯರೇ

ವಿಷಯ ದಿನಾಂಕ 27 07 2023 ರಂದು ಜರುಗಿದ 169ನೇ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 07 08 2023

******

ದಿನಾಂಕ 27 07 2023 ರಂದು ಬೆಳಗ್ಗೆ 11 00 ಗಂಟೆಗೆ ಜರುಗಿದ 169ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5 16 ರನ್ವಯ ಕಳುಹಿಸುತ್ತಿದ್ದೇನೆ

ಸಭೆಯಲ್ಲಿ ಹಾಜರಿದ್ದ ಸದಸ್ಯರು ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ ಎಸ್‌ವೈಎನ್/ಎಸ್1/169/ಸಾ ಸ /2023-24

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ 07 08 2023

**ದಿನಾಂಕ 27-07-2023 ರಂದು ಬೆಳಗ್ಗೆ 11 00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಮಂಡಳಿ ಕಟ್ಟಡ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ 169ನೇ ಸಿಂಡಿಕೇಟ್ ಸಭೆಯ ನಡಾವಳಿಗಳು**

<u>ಹಾಜರಾದ ಸದಸ್ಯರು</u>

| | | | |
|---|---|---|---|
| 1 | ಪ್ರೊ. ಡಾ ಜಯಕರ ಎಸ್ ಎಂ<br>ಕುಲಪತಿಗಳು | - | ಸಭಾಧ್ಯಕ್ಷರು |
| 2 | ಪ್ರೊ. ವಿ ವಿ ಸುರೇಶ್ ಬಾಬು | - | ಸದಸ್ಯರು |
| 3 | ಶ್ರೀ ಎಂ ಉದಯಕುಮಾರ್ | - | ಸದಸ್ಯರು |
| 4 | ಡಾ ಮಾಲಿನಿ ಕೆ | - | ಸದಸ್ಯರು |
| 5 | ಶ್ರೀ ಹರೀಶ್ ನಾಯ್ಕ್ | - | ಸದಸ್ಯರು |
| 6 | ಡಾ ಕೆ ಎ ಮಹೇಶ್ವರಯ್ಯ | - | ಸದಸ್ಯರು |
| 7 | ಶ್ರೀಮತಿ ಕ್ಷಮಾ ಕುಲಕರ್ಣಿ | - | ಸದಸ್ಯರು |
| 8 | ಪ್ರೊ. ಸಿ ಶ್ರೀನಿವಾಸ್,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 9 | ಶ್ರೀ ಶೇಕ್ ಲತೀಫ್, ಕೆ ಎ ಎಸ್<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |
| 10 | ಶ್ರೀ ಅಜಿತ್ ಕುಮಾರ್ ಹೆಗ್ಡೆ<br>ವಿತ್ತಾಧಿಕಾರಿಯವರು | - | ಆಹ್ವಾನಿತರು |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು

ಕುಲಪತಿಗಳು ನೂತನವಾಗಿ ಕುಲಸಚಿವರ ಹುದ್ದೆಗೆ ಪದಗ್ರಹಣ ಮಾಡಿದ ಶ್ರೀ ಶೇಕ್ ಲತೀಫ್ ಕೆ ಎ ಎಸ್ ಅವರನ್ನು ಸಭೆಗೆ ಪರಿಚಯಿಸಿ ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು ಅವರು ಮುಂದುವರೆದು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಎ++ ಶ್ರೇಯಾಂಗ ಬಂದಿರುವ ಬಗ್ಗೆ

ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನಿಂದ ಪ್ರಮಾಣ ಪತ್ರ ಬಂದಿರುವ ಬಗ್ಗೆ ಹಾಗೂ ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆ ಕುರಿತು ಸಿಂಡಿಕೇಟ್‌ಗೆ ಮಾಹಿತಿ ನೀಡಿದರು.

***Proceedings of the 169th meeting of the Syndicate held on 27.07.2023***

**ವಿಷಯ ಸಂಖ್ಯೆ 01:** ದಿನಾಂಕ 12.06.2023 ರಂದು ಜರುಗಿದ 168ನೇ ಸಿಂಡಿಕೇಟ್ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ದಿನಾಂಕ 12.06.2023 ರಂದು ಜರುಗಿದ 168ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸ್ಥಿರೀಕರಿಸಿತು.

***Proceedings of the 169th meeting of the Syndicate held on 27.07.2023***

**ವಿಷಯ ಸಂಖ್ಯೆ 02:** ದಿನಾಂಕ 12.06.2023 ರಂದು ಜರುಗಿದ 168ನೇ ಸಿಂಡಿಕೇಟ್ ಸಭೆಯ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

ನಿರ್ಣಯ:

ಚರ್ಚೆಯ ನಂತರ, ದಿನಾಂಕ 12.06.2023 ರಂದು ಜರುಗಿದ 168ನೇ ಸಿಂಡಿಕೇಟ್ ಸಭೆಯ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿ (ATR) ಗಳನ್ನು ಈ ಕೆಳಕಂಡ ಚರ್ಚೆ ಮತ್ತು ಮಾರ್ಪಾಟುಗಳೊಂದಿಗೆ ಪರಿಗಣಿಸಿ ಅನುಮೋದಿಸಿತು.

1. ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಶ್ರೀ ಸಿದ್ದಲಿಂಗಯ್ಯ, ನಿವೃತ್ತ ಅನುಚರರು, ಇವರನ್ನು ಬಿಡುಗಡೆ ಮಾಡಿ ವಿಶ್ವವಿದ್ಯಾಲಯಕ್ಕೆ ಹೊಸ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ನೇಮಕ ಮಾಡಲು ತೆಗೆದುಕೊಂಡ ನಿರ್ಣಯದಂತೆ ಆದಷ್ಟು ಬೇಗ ಒಬ್ಬ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ನೇಮಕ ಮಾಡಬೇಕೆಂದು ಕೋರಿದರು.

   ಕುಲಪತಿಗಳು ಉತ್ತರಿಸಿ ಈಗಾಗಲೇ ಶ್ರೀ ಸಿದ್ದಲಿಂಗಯ್ಯ, ನಿವೃತ್ತ ಅನುಚರರು, ಇವರನ್ನು ಬಿಡುಗಡೆ ಮಾಡಲು ಕಡತದಲ್ಲಿ ಅನುಮೋದಿಸಲಾಗಿದೆ ಹಾಗೂ ಹೊಸ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2. ಶ್ರೀ ಉದಯ ಕುಮಾರ್ ಎಂ ಅವರು ಮುಂದುವರೆದು ಮಾತನಾಡಿ, ಕೋಲಾರ ಸ್ನಾತಕೋತ್ತರ ಹಾಗೂ ವಿಶ್ವವಿದ್ಯಾಲಯದ ಇತರ ವಿಭಾಗಗಳಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡು ಪ್ರಸ್ತುತ ಯು.ವಿ.ಸಿ.ಇ. ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ವಿಶ್ವವಿದ್ಯಾಲಯದ ವಿಭಾಗಗಳಿಗೆ ವರ್ಗಾವಣೆ ಮಾಡಬೇಕೆಂದು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದರೂ ಸಹ ಇಲ್ಲಿಯವರೆಗೂ

ಆದೇಶ ಹೊರಡಿಸಿರುವುದಿಲ್ಲವೆಂದು ತಿಳಿಸಿ ಈ ರೀತಿ ಕಾರ್ಯ ನಿರ್ವಹಿಸುತ್ತಿರುವ 4 ದಿನಗೂಲಿ ನೌಕರರ ಹೆಸರುಗಳನ್ನು ನೀಡಿದರು ಆದಕಾರಣ ಅವರುಗಳಿಗೆ ಕೂಡಲೇ ಆದೇಶ ಹೊರಡಿಸಬೇಕೆಂದು ತಿಳಿಸಿದರು

ಕುಲಪತಿಗಳು ಮಾತನಾಡಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

3 ಅವರು ಮುಂದುವರೆದು ಕಳೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 43ರಲ್ಲಿ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಸರ್ಕಾರದ ಆದೇಶದನ್ವಯ ತುಟ್ಟಿ ಬತ್ಯೆ ಹಾಗೂ ಮನೆ ಬಾಡಿಗೆ ಭತ್ಯೆಯನ್ನು ಶೇ90ಕ್ಕೆ ಹೆಚ್ಚಿಸುವ ನಿರ್ಣಯವನ್ನು ಜಾರಿಗೊಳಿಸದಿರುವ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು ಆದಷ್ಟು ಬೇಗ ಆದೇಶ ಹೊರಡಿಸಬೇಕು ಹಾಗೂ ಹಳೇಯ ವಿದ್ಯಾರ್ಥಿಗಳಿಗೆ 2004ರ ಬದಲಾಗಿ 2002ರಿಂದ ಅನುತ್ತೀರ್ಣಗೊಂಡ ವಿಷಯಗಳಿಗೆ ಒಂದು ಬಾರಿಯ ಅವಕಾಶದಂತೆ ಮತ್ತೊಂದು ಪರೀಕ್ಷೆ ನಡೆಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು

ಕುಲಪತಿಗಳು ಮಾತನಾಡಿ ದಿನಗೂಲಿ ನೌಕರರಿಗೆ ತುಟ್ಟಿ ಭತ್ಯೆ ಹಾಗೂ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಿಸುವ ಕುರಿತು ಕಾನೂನು ಅಬಿಪ್ರಾಯ ಕೋರಿರುವುದಾಗಿ ತಿಳಿಸಿ ಈ ಬಗ್ಗೆ ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಹಾಗೂ ಹಳೇಯ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ನಡೆಸುವ ಬಗ್ಗೆ ವಿದ್ಯಾವಿಷಯಕ ಪರಿಷತ್ತಿಗೆ ಮಂಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

***Proceedings of the 169th meeting of the Syndicate held on 27 07 2023***

ವಿಷಯ ಸಂಖ್ಯೆ 3 ಡಾ ನೀಮಾಜ್ಞಾನದೇವ್ ರವರ ನೇಮಕಾತಿ ಅದೇಶವನ್ನು ರದ್ದುಗೊಳಿಸಿರುವ ವಿ ವಿ ಆದೇಶವನ್ನು ಹಿಂಪಡೆದು ಮರು ಅದೇಶವನ್ನು ನೀಡುವಂತೆ ಸದರಿ ಶಿಕ್ಷಕರು ಸಲ್ಲಿಸಿರುವ ಮನವಿ ಪತ್ರದ ಬಗ್ಗೆ

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯವು ನೀಡಿದ ಕಾಲಾವಧಿಯಲ್ಲಿ ಜಾತಿ ಪ್ರಮಾಣ ಪತ್ರದ ನೈಜತೆ ಕುರಿತು ದೃಡೀಕರಣ ಹಾಗೂ ಸಿಂಧುತ್ವ ಪ್ರಮಾಣ ಪತ್ರ ಬರದ ಕಾರಣ ಈಗಾಗಲೆ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಡಾ ನೀಮಾಜ್ಞಾನದೇವ್ ಅವರನ್ನು ವಾಪಸ್ಸು ಸೇವೆಗೆ ಪಡೆಯುವ ಬಗ್ಗೆ ಕಾನೂನು ಸಲಹೆಗಾರರು ನೀಡಿರುವ ಅಬಿಪ್ರಾಯವನ್ನು ಸಿಂಡಿಕೇಟ್ ಸಬೆಯ ಮುಂದೆ ಮಂಡಿಸಿ, ಕಾನೂನು ಅಬಿಪ್ರಾಯದಂತೆ ಅವರನ್ನು ಸೇವೆಗೆ ವಾಪಸ್ಸು ಪಡೆಯಲು ಸಾದ್ಯವಿರುವುದಿಲ್ಲವೆಂದು ತಿಳಿಸಿದರು

ನಿರ್ಣಯ

ಚರ್ಚೆಯನಂತರ ಡಾ ನೀಮಾಜ್ಞಾನದೇವ್ ಅವರಿಗೆ ಸೂಕ್ತ ಹಿಂಬರಹ ನೀಡಲು ಸಿಂಡಿಕೇಟ್ ನಿರ್ಣಯಿಸಿತು

*Proceedings of the 169th meeting of the Syndicate held on 27 07 2023*

**Item No 04** Permission to lay Jio Digital Optical Fibre Cable below the footpath from Ullal Junction, Bangalore University Campus to Vice-Chancellor's Residence backside transmission tower through HDD method

The Finance Officer opined that the rates offered by M/S Geo Digital Fiber Pvt Ltd , for laying Digital Optical Fibre Cable have to be cross checked with the Government rates and the said firm has to pay lease charges to the University as the utilized land for laying cable will not available for other purpose Further, the structure should be restored by the firm at their own cost

Mr Udaya Kumar M expressed that the work of laying of Digital Optical Fibre Cable by the above said firm will not be useful for the Bangalore University

***Resolution***

After detailed discussions it was resolved to defer the matter

*Proceedings of the 169th meeting of the Syndicate held on 27 07 2023*

**ವಿಷಯ ಸಂಖ್ಯೆ 05** ಡಾ ಬಿ ಕೆ ರವಿ ಪ್ರಾಧ್ಯಾಪಕರು ಸಂವಹನ ವಿಭಾಗ ಇವರನ್ನು ಕೊಪ್ಪಳ ವಿಶ್ವವಿದ್ಯಾಲಯದ ಕೊಪ್ಪಳದ ಕುಲಪತಿ ಹುದ್ದೆಗೆ ನೇಮಕ ಮಡಲಾಗಿ ಇದಕ್ಕೆ ಸಂಬಂಧಿಸಿದಂತೆ ದಿನಾಂಕ 08 05 2023 ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಿರುವ ಸೇವಾ ಷರತ್ತು ಹಾಗೂ ನಿಬಂಧನೆಗಳನ್ನು ಅನುಮೋದಿಸುವ ಬಗ್ಗೆ

**ನಿರ್ಣಯ**

ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಪ್ರಾಧ್ಯಾಪಕರಾದ ಡಾ ಬಿ ಕೆ ರವಿ, ಇವರನ್ನು ಕೊಪ್ಪಳ ಜಿಲ್ಲೆಯ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ದಿನಾಂಕ 20 03 2023ರಿಂದ ನೇಮಕ ಮಡಲಾಗಿರುವ ಸಂಬಂದ ಸರ್ಕಾರದ ಅಧಿಸೂಚನೆ ದಿನಾಂಕ 08 05 2023 ಹಾಗೂ ತಿದ್ದುಪಡಿ ಆದೇಶ ದಿನಾಂಕ 23 05 2023ರಲ್ಲಿ ಹೊರಡಿಸಿರುವ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು

ಮುಂದುವರೆದು ಶ್ರೀಯುತರು ಇನ್ನೂ ನಿವೃತ್ತಿಯಾಗಿರದ ಕಾರಣ ಸರ್ಕಾರದ ಅದಿಸೂಚನೆ ದಿನಾಂಕ 08 05 2023ರ ಕಂಡಿಕೆ 4ರಲ್ಲಿ "His Service as the Vice Chancellor, Koppala University, Koppala shall not counted for any other purposes " ಎಂದು ಇರುವುದರಿಂದ ಅವರ ಪಿಂಚಣಿ ಹಾಗೂ ರಜೆ ಉಪಲಬ್ಧಿಗಳನ್ನು ಕೊಪ್ಪಳ ವಿಶ್ವವಿದ್ಯಾಲಯದಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವ ಕುರಿತು ಸರ್ಕಾರದಿಂದ ಸ್ಪಷ್ಟೀಕರಣ ಕೋರಲು ಸಿಂಡಿಕೇಟ್ ನಿರ್ಣಯಿಸಿತು

Proceedings of the 169th meeting of the Syndicate held on 27 07 2023

ವಿಷಯ ಸಂಖ್ಯೆ 06 ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಇಬ್ಬರು ಶುಶ್ರೂಷಕಿಯರುಗಳನ್ನು ನೇಮಿಸಿಕೊಂಡಿರುವ ಬಗ್ಗೆ

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದ ವತಿಯಿಂದ ಕಾಲಕಾಲಕ್ಕೆ ವಿಶ್ವವಿದ್ಯಾಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಶಿಬಿರಗಳನ್ನು ಆಯೋಜಿಸಲು ಸೂಚಿಸಬೇಕೆಂದು ಕೋರಿದರು ಆರೋಗ್ಯ ಕೇಂದ್ರದಲ್ಲಿ ಇರುವ ಪ್ರಸ್ತುತ ಉಪಕರಣಗಳು ಸುಸ್ಥಿತಿಯಲ್ಲಿಲ್ಲವೆಂದರು

ಕುಲಪತಿಗಳು ಮಾತನಾಡಿ, ವಿಶೇಷ ತಜ್ಞ ವೈದ್ಯರನ್ನು ಕನ್ಸಲ್ಟಂಟ್ ಆಗಿ ನೇಮಕ ಮಾಡುವ ಅವಶ್ಯಕತೆ ಇದೆ ಈಗಾಗಲೇ ಬಿ ಜಿ ಎಸ್ ಗ್ಲೋಬಲ್ ಹಾಸ್ಪಟಿಲ್ ಹಾಗೂ ಶ್ರೀ ರಾಜರಾಜೇಶ್ವರಿ ಮೆಡಿಕಲ್ ಕಾಲೇಜ್ ಅಂಡ್ ಹಾಸ್ಪಿಟಲ್ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರವನ್ನು ನಡೆಸುವ ಬಗ್ಗೆ ಸಂಪರ್ಕಿಸಲಾಗಿದೆ ಎಂದು ತಿಳಿಸಿದರು ಸರ್ಕಾರದಿಂದಲೂ ಆರೋಗ್ಯ ಕೇಂದ್ರ ಪ್ರಾರಂಬಿಸುವ ಬಗ್ಗೆ ವ್ಯವಹರಿಸಲು ಕ್ರಮ ಕೈಗೊಳ್ಳಲಾಗುವುದು ಇದರಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಕಡಿಮೆಯಾಗುವುದೆಂದು ತಿಳಿಸಿದರು

ನಿರ್ಣಯ

ಮೇಲ್ಕಂಡ ಚರ್ಚೆಯೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಇಬ್ಬರು ಶುಶ್ರೂಷಕಿಯರುಗಳನ್ನು ನೇಮಿಸಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು

Proceedings of the 169th meeting of the Syndicate held on 27 07 2023

ವಿಷಯ ಸಂಖ್ಯೆ 07 ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಶಾಸನಬದ್ಧ ಅಧಿಕಾರಿಗಳು, ವಿವಿಧ ಅಧ್ಯಯನ ಕೇಂದ್ರ ಮತ್ತು ಘಟಕಗಳಿಗೆ ನಿರ್ದೇಶಕರು ವಿಶೇಷಾದಿಕಾರಿಗಳು ಹಾಗೂ ಸಂಯೋಜಕರುಗಳನ್ನು ನೇಮಕ ಮಾಡುವ ಬಗ್ಗೆ

ನಿರ್ಣಯ

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಕೆಳಕಂಡ ಅಧ್ಯಯನ ಕೇಂದ್ರ ಮತ್ತು ಘಟಕಗಳಿಗೆ ನಿರ್ದೇಶಕರು ವಿಶೇಷಾಧಿಕಾರಿಗಳು ಹಾಗೂ ಸಂಯೋಜಕರುಗಳನ್ನು ನೇಮಿಸಲು ಸಿಂಡಿಕೇಟ್ ಅನುಮೋದಿಸಿತು

| ಕ್ರಸಂ | ವಿಭಾಗ/ಕಛೇರಿ | ನೇಮಕಗೊಂಡವರು |
|---|---|---|
| 1 | ನಿರ್ದೇಶಕರು<br>ಪ್ಲಾನಿಂಗ್ ಮಾನಿಟರಿಂಗ್ ಅಂಡ್ ಎವಾಲ್ಯುಯೇಷನ್ ಬೋರ್ಡ್ | ಪ್ರೊ. ಅಶೋಕ್ ಡಿ ಹಂಜಗಿ<br>ಭೂಗೋಳಶಾಸ್ತ್ರ ವಿಬಾಗ |

| | | |
|---|---|---|
| 2 | ನಿರ್ದೇಶಕರು<br>ಕಾಲೇಜು ಅಭಿವೃದ್ಧಿ ಮಂಡಳಿ | ಪ್ರೊ. ಸಿ ನಾಗಭೂಷಣ,<br>ಕನ್ನಡ ಅಧ್ಯಯನ ಕೇಂದ್ರ |
| 3 | ನಿರ್ದೇಶಕರು<br>ಮಾನವ ಸಂಪನ್ಮೂಲ ನಿರ್ವಹಣೆ ಕೇಂದ್ರ | ಪ್ರೊ. ಸಿ ಎಸ್ ಕರಿಗಾರ್<br>ಜೀವರಸಾಯನಶಾಸ್ತ್ರ ವಿಭಾಗ |
| 4 | ನಿರ್ದೇಶಕರು<br>ಗಾಂಧಿ ಅಧ್ಯಯನ ಕೇಂದ್ರ | ಪ್ರೊ. ಶ್ರೀಕೀರ್ತಿ ಬಿ ಎನ್<br>ಇಂಗ್ಲೀಷ್ ವಿಭಾಗ |
| 5 | ನಿರ್ದೇಶಕರು<br>ರಾಮನಗರ ಸ್ನಾತಕೋತ್ತರ ಕೇಂದ್ರ | ಪ್ರೊ. ರಾಮಕೃಷ್ಣಯ್ಯ ಕೆ, ಪ್ರದರ್ಶನ ಕಲಾ ವಿಭಾಗ ಇವರನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ನಿರ್ಣಯಿಸಿತು |
| 6 | ನಿರ್ದೇಶಕರು<br>ಪರೀಕ್ಷಾ ಪೂರ್ವ ತರಬೇತಿ ಕೇಂದ್ರ | ಕುಲಸಚಿವರು ಪ್ರಾಧ್ಯಾಪಕರ ಪಟ್ಟಿಯನ್ನು ಪರಿಶೀಲಿಸಿ ಸೂಕ್ತ ಪ್ರಾಧ್ಯಾಪಕರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಲು ಶಿಫಾರಸ್ಸು ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು |

ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಮೂಲ ಸೌಕರ್ಯಗಳಿಲ್ಲ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗಿಂತ ಅತಿಥಿ ಉಪನ್ಯಾಸಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ವಿಜ್ಞಾನ ವಿಷಯಗಳನ್ನು ಪ್ರಾರಂಭಿಸದ ಕಾರಣ ಹಾಗೂ ಮೂಲ ಸೌಕರ್ಯಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ನಾತಕೋತ್ತರ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಜ್ಞಾನಭಾರತಿ ಆವರಣಕ್ಕೆ ಸ್ಥಳಾಂತರಿಸಬೇಕೆಂದು ಅಭಿಪ್ರಾಯಪಟ್ಟರು

ಪ್ರೊ. ವಿ ವಿ ಸುರೇಶ್ ಬಾಬು ಅವರು ಮಾತನಾಡಿ, ಸ್ನಾತಕೋತ್ತ ಕೇಂದ್ರವನ್ನು ಮುಚ್ಚಿದರೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಬಹುದು ಆದಕಾರಣ ಈ ಬಗ್ಗೆ ಸಂಬಂದಪಟ್ಟ ಅಧಿಕಾರಿಗಳು, ಪ್ರಜಾಪ್ರತಿನಿಧಿಗಳು ಹಾಗೂ ಮಂತ್ರಿಗಳೊಂದಿಗೆ ಚರ್ಚಿಸುವುದು ಒಳಿತೆಂದು ತಿಳಿಸಿದರು

ಕುಲಪತಿಗಳು ಮಾತನಾಡಿ, ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಅಧ್ಯಯನ ಮಾಡುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ವಿಶ್ವವಿದ್ಯಾಲಯ ಖರ್ಚು ಮಾಡುತ್ತಿರುವ ವೆಚ್ಚವನ್ನು ಲೆಕ್ಕಹಾಕಿದರೆ ಯುನೈಟೆಡ್ ಕಿಂಗ್‌ಡಮ್‌ನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲು ಸದರಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ವತಿಯಿಂದ ಪ್ರಾಯೋಜಿಸಬಹುದಾಗಿದೆ ಆದಕಾರಣ ಅಲ್ಲಿನ ಹಾಸ್ಟೆಲ್ ಹಾಗೂ ಇತರ ಮೂಲ ಸೌಕರ್ಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಆಗುವವರೆಗೂ ತಾತ್ಕಾಲಿಕವಾಗಿ ಜ್ಞಾನಭಾರತಿ ಆವರಣಕ್ಕೆ ಸ್ಥಳಾಂತರಿಸುವ ಬಗ್ಗೆ ಒಂದು ಸಮಿತಿಯನ್ನು ರಚಿಸಿ ವರದಿ ಪಡೆದುಕೊಳ್ಳುವುದು ಉಚಿತವೆಂದು ತಿಳಿಸಿದರು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಂಬಂಧಪಟ್ಟವರೊಂದಿಗೆ ಕೂಡ ಚರ್ಚಿಸುವುದಾಗಿ ತಿಳಿಸಿದರು

ದೀರ್ಘ ಚರ್ಚೆಯನಂತರ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು

| | | | |
|---|---|---|---|
| 1 | ಕುಲಸಚಿವರು | – | ಅಧ್ಯಕ್ಷರು |
| 2 | ಶ್ರೀ ಉದಯ ಕುಮಾರ ಎಂ | – | ಸದಸ್ಯರು |
| 3 | ಶ್ರೀ ಹರೀಶ್ ನಾಯಕ್ | – | ಸದಸ್ಯರು |
| 4 | ಪ್ರೊ. ಎಂ ಹನುಮಂತಪ್ಪ | – | ಸದಸ್ಯರು |
| 5 | ಶ್ರೀ ನಾಗೇಂದ್ರ, ಅಧೀಕ್ಷಕರು | – | ಸಂಚಾಲಕರು |

*Proceedings of the 169th meeting of the Syndicate held on 27 07 2023*

**ವಿಷಯ ಸಂಖ್ಯೆ 08** ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕ ಪರಿಶೋದಕರನ್ನು ನೇಮಕ ಮಾಡುವ ಕುರಿತು

**ನಿರ್ಣಯ**

ಚರ್ಚೆಯ ನಂತರ ಲೆಕ್ಕ ಪರಿಶೋಧನಾ ವಿಚಾರಣೆ/ಆಕ್ಷೇಪಣಾ ಕಂಡಿಕೆ/ಬಾಕಿ ವಸೂಲಾತಿ ಕುರಿತು ಅನುಸರಣಾ ಉತ್ತರಗಳನ್ನು ಸಿದ್ಧಪಡಿಸಲು ಹಾಗೂ ವಾರ್ಷಿಕ ಲೆಕ್ಕಪತ್ರಗಳ ಸಮನ್ವಯತೆ ಕಾರ್ಯ ಹಾಗೂ ಇತರ ಕಾರ್ಯಗಳನ್ನು ನಿರ್ವಹಿಸಲು ಶ್ರೀ ವೆಂಕಟರಾಮಣ್ಣ, ನಿವೃತ್ತ ಉಪನಿಯಂತ್ರಕರು, ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋದನಾ ಇಲಾಖೆ ಇವರ ಸೇವೆಯನ್ನು ದಿನಾಂಕ 06 05 2023ರಿಂದ ಒಂದು ವರ್ಷದ ಅವದಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾಸಿಕ ರೂ 55 000/–ಗಳ(ಐವತ್ತೈದು ಸಾವಿರ ರೂಪಾಯಿಗಳ) ಸಂಭಾವನೆಯಂತೆ ನೇಮಕ ಮಾಡಲು ಸಿಂಡಿಕೇಟ್ ಅನುಮತಿಸಿತು

*Proceedings of the 169th meeting of the Syndicate held on 27 07 2023*

**ವಿಷಯ ಸಂಖ್ಯೆ 09** ರಾಜ್ಯ ಗ್ರಂದಾಲಯ ಪ್ರಾದಿಕಾರಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್‌ನಿಂದ ಒಬ್ಬ ಸದಸ್ಯರ ಹೆಸರನ್ನು ಆಯ್ಕೆ ಮಾಡಿ ಕಳುಹಿಸುವ ಬಗ್ಗೆ

**ನಿರ್ಣಯ**

ಚರ್ಚೆಯ ನಂತರ, ಡಾ ಮಾಲಿನಿ ಕೆ, ಸಿಂಡಿಕೇಟ್ ಸದಸ್ಯರು ಇವರನ್ನು ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಬೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ನಿರ್ಣಯಿಸಿತು

*Proceedings of the 169th meeting of the Syndicate held on 27 07 2023*

**ವಿಷಯ ಸಂಖ್ಯೆ 10** ಸಂಶೋಧನಾ ವಿದ್ಯಾರ್ದಿಗಳಿಗೆ ಬೋದನಾ ಅವಧಿ ಹಂಚಿಕೆ ಮಾಡುವ ಬಗ್ಗೆ ಹೊರಡಿಸಲಾದ ಸುತ್ತೋಲೆಯನ್ನು ಹಿಂಪಡೆದಿರುವ ವಿಷಯವನ್ನು ಸಿಂಡಿಕೇಟ್ ಸಬೆಯ ಅನುಸಮರ್ದನೆಗೆ ಮಂಡಿಸುವ ಬಗ್ಗೆ

**ನಿರ್ಣಯ**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದಿಂದ, ಶಿಷ್ಯವೇತನ ಪಡೆಯುತ್ತಿರುವ ಸಂಶೋಧನಾ ವಿದ್ಯಾರ್ದಿಗಳಿಗೆ ಬೋಧನಾ ಅವಧಿ ಹಂಚಿಕೆ ಮಾಡುವ ಬಗ್ಗೆ ಈ ಹಿಂದೆ ಹೊರಡಿಸಲಾಗಿದ್ದ ಆದೇಶವನ್ನು ಸುತ್ತೋಲೆ

ಸಂಖ್ಯೆ:ಇಎಸ್‌ಟಿ-2/ಇ9/ಅ.ಉ.ಸೇವೆ/2023-24 ದಿನಾಂಕ: 10.04.2023ರಲ್ಲಿ ಹಿಂಪಡೆದಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

ಕುಲಪತಿಗಳು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಬೋಧನಾ ಕಾರ್ಯಕ್ಕೆ ಉಪಯೋಗಿಸಿಕೊಂಡಲ್ಲಿ ಅವರಿಗೆ ಅನುಭವ ದೊರಕುವುದರಿಂದ, ಇಚ್ಚಿಸಿದ ವಿದ್ಯಾರ್ಥಿಗಳಿಗೆ ವಾರದಲ್ಲಿ ಕೆಲವು ಗಂಟೆಗಳ ಕಾಲ ಬೋಧನೆಗೆ ಅವಕಾಶ ನೀಡುವ ಬಗ್ಗೆ ವಿಭಾಗದ ಅಧ್ಯಕ್ಷರುಗಳ ಸಭೆಯಲ್ಲಿ ಚರ್ಚಿಸುವುದಾಗಿ ತಿಳಿಸಿದರು.

*Proceedings of the 169th meeting of the Syndicate held on 27.07.2023*

**Item No. 11:** To ratify the action taken in approving the Panel of examiners and Panels constituting Board of Examiners in the faculties of Arts, Science, Commerce, Education, Physical Education and Law for 2020-21 and 2021-22 Exams (both UG & PG).

***Resolution:***

The Syndicate ratified the action taken by the Bangalore University in approving the Panel of examiners and Panels constituting Board of Examiners in the faculties of Arts, Science, Commerce, Education, Physical Education and Law for the years 2020-21 and 2021-22 examinations (both UG & PG).

*Proceedings of the 169th meeting of the Syndicate held on 27.07.2023*

**Item No. 12:** Hiring of vehicles towards examination related works such as distribution of question papers and Squad duty for the examinations held during February/March 2023-reg.

The Registrar opined that hiring of vehicles without following the procedures as per KTPP Act, will attract Audit objection. Therefore, for any procurement proper procedures should be followed. However, the action taken in hiring the vehicles for the last examinations may be approved.

***Resolution:***

After discussions, the Syndicate resolved to ratify the action taken by the University in hiring the vehicles for the examination related works from M/S M.M. Tours and Travels vide University order U.O.No.EX-III:VEHICLES/HIRE/MM-TOURS:BENGALURU:2022-23 dated:02.03.2023. It was directed that examination

branch should take immediate action to invite short term Tender for hiring vehicles for the forthcoming U.G. examination works.

*Proceedings of the 169th meeting of the Syndicate held on 27.07.2023*

**Item No. 13:** Conduct of 58th Annual Convocation & Inviting Chief Guest-reg.

The members suggested the names of eminent personalities for inviting one of them as the Chief Guest for the 58th Annual Convocation of the Bangalore University.

***Resolution:***

The Syndicate resolved to recommend the following panel of names of the eminent personalities for the approval of the Hon'ble Governor of Karnataka to invite one of the eminent personalities as the Chief Guest for the 58th Annual Convocation of the Bangalore University to be held during the month of September 2023.

1. Mr. Nikhil Kamath OR Mr. Nithin Kamath, Young Entrepreneur,
2. Dr. Sudha Murthy, Infosys Foundation
3. Dr. Dharmendra Pradhan, Union Minister of HRD
4. Dr. Nandan Nilekani, Co-founder, Infosys
5. Shri. Sreedhara Panicker Somanath, Chairman, ISRO
6. Dr. Azim Premji, Founder Wipro OR Mr. Rishad Premji Chairman, Wipro
7. Mr. Kris Gopalakrishna, Co-founder, Infosys
8. Mr. Navakanta Bhat, Centre for Nano Science & Engineering, IISC.
9. Mr. Jagadeesh

*Proceedings of the 169th meeting of the Syndicate held on 27.07.2023*

**Item No. 14:** Recommending the names of eminent personalities for conferring honorary doctorate degree at the 58th Annual Convocation of Bangalore University-reg.

***Resolution:***

The Vice-Chancellor informed the Syndicate that in the previous Syndicate meeting the members were requested to send the names of distinguished persons for

placing the same before the Screening Committee to be constituted by Hon'ble Governor of Karnataka. He requested to suggest the names and the said names be kept confidential till the approval of the Honb'le Governor.

The members unanimously suggested the names of the eminent personalities for conferring honorary doctorate degree at the 58th Annual Convocation of Bangalore University to enable the Vice-Chancellor to place the same before the Screening Committee for its consideration. The names suggested by the members were approved by the Syndicate.

Further, the Syndicate resolved to nominate Prof. B.K. Ravi, Vice-Chancellor, Koppala University as the University nominee to the Screening Committee to be constituted by the Hon'ble Governor of Karnataka for finalizing the list of eminent personalities for conferring of Honorary Degree at the 58th Annual Convocation of the Bangalore University.



**Item No. 15:** Conduct of Make-up/Supplementary examination to the Students who have failed in 5th/6th semester of UG courses and enhancement of PG seats in the University Departments under payment category-reg.

***Resloution:***

The Syndicate resolved to approve the recommendations of the Deans Committee for conduct of Make-up/Supplementary examination to the students who have failed in 5th/6th semester of UG courses and enhancement of PG seats in the University Departments under payment category, as per the resolution of the Academic Council held on 06-07-2023.

*Proceedings of the 169th meeting of the Syndicate held on 27.07.2023*

ವಿಷಯ ಸಂಖ್ಯೆ 16: ಶ್ರೀಮತಿ ಮಾಲಾ, ಕಿರಿಯ ಸಹಾಯಕಿ( ನಿವೃತ್ತಿ), ಹಣಕಾಸು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇವರು ಪೋಷಿಸುತ್ತಿರುವ ಮಗುವಿನ ಪಾಲನೆಗೆ ಶೈಕ್ಷಣಿಕ ವೆಚ್ಚವನ್ನು ಮಂಜೂರು ಮಾಡುವ ಬಗ್ಗೆ.

ನಿರ್ಣಯ:

ಶ್ರೀಮತಿ ಮಾಲಾ, ಕಿರಿಯ ಸಹಾಯಕಿ (ನಿವೃತ್ತಿ), ಹಣಕಾಸು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ದೊರಕಿದ ಮಗುವಿನ ಪಾಲನೆಗೆ ಹಾಗೂ

ಶೈಕ್ಷಣಿಕ ವೆಚ್ಚ ಬರಿಸಲು ಪ್ರಸ್ತುತ ನೀಡುತ್ತಿರುವ ಮಾಸಿಕ ರೂ 5,000/-ಗಳಿಂದ ರೂ 8,000/-ಕ್ಕೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು

*Proceedings of the 169th meeting of the Syndicate held on 27 07 2023*

ವಿಷಯ ಸಂಖ್ಯೆ 17 ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಕುಂದು ಕೊರತೆಗಳ ಬಗ್ಗೆ ಸಮಿತಿಯು ನೀಡಿರುವ ಶಿಪಾರಸ್ಸುಗಳನ್ನು ಅನುಮೋದಿಸುವ ಕುರಿತು

ನಿರ್ಣಯ

ಚರ್ಚೆಯ ನಂತರ ಸ್ನಾತಕೋತ್ತರ ಮತ್ತು ಸಂಶೋದನಾ ವಿದ್ಯಾರ್ಥಿಗಳ ಕುರಿತು ಸಲ್ಲಿಸಿದ ಮನವಿಯ ಕುರಿತು ರಚಿಸಲಾದ ಪ್ರೊ. ವಿ ವಿ ಸುರೇಶ್ ಬಾಬು, ಡೀನರು ವಿಜ್ಞಾನ ನಿಕಾಯ, ಇವರ ನೇತೃತದಲ್ಲಿನ ಸಮಿತಿಯ ವರದಿ ದಿನಾಂಕ 06 02 2023ರಲ್ಲಿನ ವಿಷಯ ಸಂಖ್ಯೆ 1 2, 3, 6, 7, 8, 9, 10 11, 12ರಲ್ಲಿನ ಶಿಫಾರಸ್ಸುಗಳನ್ನು ಸಿಂಡಿಕೇಟ್ ಅನುಮೋದಿಸಿತು

ಸದರಿ ವರದಿಯಲ್ಲಿನ ವಿಷಯ ಸಂಖ್ಯೆ 4 5ರಲ್ಲಿನ ಶಿಪಾರಸ್ಸು ಕುರಿತು ಸಿಂಡಿಕೇಟ್ ಚರ್ಚೆ ನಡೆಸಿ, ಸಂಶೋಧನಾ ವಿದ್ಯಾರ್ಥಿಗಳ ಮೊದಲ ಎರಡು ವರ್ಷಗಳ ಅವಧಿಯನ್ನು ಜೆ ಆರ್ ಎಫ್ ಎಂದು, ನಂತರ 3 ವರ್ಷಗಳ ಅವದಿಯನ್ನು ಎಸ್ ಆರ್ ಎಫ್ ಎಂದು ಪರಿಗಣಿಸುವ ಕುರಿತು ಹಾಗೂ ಸಂಶೋಧನಾ ವಿದ್ಯಾರ್ದಿಗಳ ಶಿಷ್ಯವೇತನವನ್ನು ಹೆಚ್ಚಿಸುವ ಕುರಿತು, ಕರ್ನಾಟಕದ ಇತರ ಎಲ್ಲಾ ವಿಶ್ವವಿದ್ಯಾಲಯಗಳಿಂದ ಆಯಾ ವಿಶ್ವವಿದ್ಯಾಲಯಗಳ ವತಿಯಿಂದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಶಿಷ್ಯ ವೇತನ ಹಾಗೂ ಇತರ ವಿವರಗಳ ಮಾಹಿತಿ ಪಡೆದುಕೊಂಡು ನಂತರ ಈ ಕುರಿತು ಕ್ರಮ ತೆಗೆದುಕೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು

*Proceedings of the 169th meeting of the Syndicate held on 27 07 2023*

**Item No 18** To consider the proposal for sanctioning of professional fees to the reviewer for preparation of SSR for accreditation of NAAC in 4th Cycle

***Resolution***

The Syndicate placed on record the services rendered by Prof Kathre Shakuntala Former Registrar and Professor of Zoology (Retired) in assisting the University for preparation of NAAC SSR report and other premiliminary works It was resolved to sanction Rs 1,00,000/-(Rupees one lakh) as an hanoronum to her The letter of appreciation should be sent to her immediately

**Item No. 19:** To consider the Local Inquiry Committee reports submitted under the Chairmanship of Prof. Naryanaswamy M, Dean Faculty of Education in respect of Netaji College of Education (SJB College of Education), Bengaluru and Kalanikthan College of Education, Bengaluru for the year 2022-23-reg.

Sri Udaya Kumar M expressed that the Syndicate has not approved for constitution of the Committee and two LIC committees have visited these college during July 2023. He insisted to provide all details with regard to constitution of the Local Inquiry Committee in respect of the Netaji College of Education (SJB College of Education), Bengaluru and Kalanikthan College of Education colleges.

***Resolution:***

After the detailed discussion, the Syndicate resolved to defer the matter.

*Proceedings of the 169th meeting of the Syndicate held on 27.07.2023*

**ವಿಷಯ ಸಂಖ್ಯೆ 20:** ಡಿಜಿಟಲ್ ಮೌಲ್ಯಮಾಪನ ಕಾರ್ಯಗಳಿಗೆ ಕೆಲವೊಂದು ಮಾರ್ಪಾಟು ಮಾಡುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಕಾರ್ಯಗಳಲ್ಲಿ ಆಗುವ ವಿಳಂಬ ಹಾಗೂ ತೊಂದರೆಗಳನ್ನು ಸಿಂಡಿಕೇಟ್‌ಗೆ ವಿವರವಾಗಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನ ಕಾರ್ಯದಲ್ಲಿ ಉತ್ತರ ಪತ್ರಿಕೆಗಳನ್ನು ಸ್ಕ್ಯಾನಿಂಗ್ ಮಾಡಿಸುವ ಕಾರ್ಯವನ್ನು ಹೊರಗುತ್ತಿಗೆ (Outsource) ನೀಡಿದರೆ, 2 ಪಾಳಿಯಲ್ಲಿ ಕೆಲಸ ನಿರ್ವಹಿಸಿ ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಕಾರ್ಯವನ್ನು ಅತಿ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲು ಹಾಗೂ ಪರೀಕ್ಷಾ ಫಲಿತಾಂಶವನ್ನು ಶೀಘ್ರವಾಗಿ ಪ್ರಕಟಿಸಲು ಅನುಕೂಲವಾಗುತ್ತದೆ. ಒಂದು ಉತ್ತರ ಪತ್ರಿಕೆಗೆ ರೂ.1.50ರಂತೆ ಹೊರಗುತ್ತಿಗೆ ಸಿಬ್ಬಂದಿಗೆ ನೀಡಿದರೆ ಒಬ್ಬ ವ್ಯಕ್ತಿಯು ದಿನಕ್ಕೆ 500 ರಿಂದ 750ಕ್ಕೆ ಉತ್ತರ ಪತ್ರಿಕೆಗಳನ್ನು ಸ್ಕ್ಯಾನಿಂಗ್ ಮಾಡಬಹುದು. ಸಿಬ್ಬಂದಿ ಕೊರತೆಯಿಂದಾಗಿ ಈ ಕಾರ್ಯ ವಿಳಂಬವಾಗುತ್ತಿರುವುದರಿಂದ ಹೊರಗುತ್ತಿಗೆ ನೀಡುವುದು ಒಳಿತೆಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಎಂ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ಧಿಯನ್ನು ಉಲ್ಲೇಖಿಸಿ ಮಾತನಾಡಿ ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಕಾರ್ಯದಲ್ಲಿ ಅಕಾರ್ಯ (Malpractice) ನಡೆದಿದೆ. ಪರೀಕ್ಷಾನಂತರ ಖಾಲಿ ಉತ್ತರ ಪತ್ರಿಕೆಗಳನ್ನು ಮತ್ತೆ ವಿದ್ಯಾರ್ಥಿಗಳಿಗೆ ನೀಡಿ ಉತ್ತರ ಬರೆಸಿರಬಹುದು. ಈ ಬಗ್ಗೆ ತನಿಖೆ ನಡೆಸಬೇಕೆಂದು ತಿಳಿಸಿದರು.

ಈ ಹಂತದಲ್ಲಿ ಕುಲಸಚಿವರು (ಮೌಲ್ಯಮಾಪನ) ಅವರು ಉತ್ತರಿಸಿ, 60(ಅರವತ್ತು) ಉತ್ತರ ಪತ್ರಿಕೆಗಳು ಬೇರೆ ಬೇರೆಯಾಗಿದ್ದುದು ಕಂಡುಬಂದ ಕಾರಣ ಸದರಿ ವಿಷಯದಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿ ಎಫ್ ಐ ಆರ್ ದಾಖಲಿಸಲಾಗಿದೆ ಪೊಲೀಸ್ ತನಿಖೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು

ಶ್ರೀ ಉದಯ ಕುಮಾರ್ ಎಂ ಅವರು ಮುಂದುವರೆದು ಮಾತನಾಡಿ, ಡಾ ತಮ್ಮಯ್ಯ ಎಂಬುವವರನ್ನು ಕಳೆದ ಎರಡು ವರ್ಷಗಳಿಂದ ಕಸ್ಟೋಡಿಯನ್ ಆಗಿ ನಿರಂತರವಾಗಿ ನೇಮಕ ಮಾಡಲಾಗಿದೆ ಇವರು ಕಳೆದ ಎರಡು ವರ್ಷಗಳಿಂದ ಪರೀಕ್ಷಾ ವಿಬಾಗದಲ್ಲಿ ಖಾಯಂ ಆಗಿ ಹಾಜರಿರುತ್ತಾರೆ ಇದರಲ್ಲಿ ಅಕ್ರಮ ನಡೆದಿರಬಹುದು ಈ ಬಗ್ಗೆ ತನಿಖೆ ನಡೆಸಬೇಕೆಂದು ಕೋರಿದರು ಅವರು ಮುಂದುವರೆದು ಗೌಪ್ಯತೆ ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಸ್ಕ್ಯಾನಿಂಗ್ ಕಾರ್ಯವನ್ನು ಹೊರಗುತ್ತಿಗೆ ಮಾಡಬಾರದೆಂದು ತಿಳಿಸಿದರು ಡಾ ಕೆ ಎ ಮಹೇಶ್ವರಯ್ಯ ಅವರು ಡಾ ತಮ್ಮಯ್ಯ ಅವರು ಪರೀಕ್ಷಾ ವಿಬಾಗದಲ್ಲಿ ಖಾಯಂ ಆಗಿ ಹಾಜರಿರುವುದನ್ನು ಗಮನಿಸಿರುವುದಾಗಿ ತಿಳಿಸಿದರು

ಕುಲಪತಿಗಳು ಮಾತನಾಡಿ ಪರೀಕ್ಷಾ ಕಾರ್ಯಗಳಲ್ಲಿ ಯಾವುದೇ ಅಕ್ರಮವಾಗಬಾರದು ಈ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು

ನಿರ್ಣಯ

ದೀರ್ಘ ಚರ್ಚೆಯ ನಂತರ ಡಾ ತಮ್ಮಯ್ಯ ಅವರನ್ನು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಪರೀಕ್ಷಾ ವಿಭಾಗದಲ್ಲಿ ಕಸ್ಟೋಡಿಯನ್ ಹಾಗೂ ಇತರ ಪರೀಕ್ಷಾ ಕಾರ್ಯಗಳಿಗೆ ನೇಮಕಾತಿ ಮಾಡದರೆನ್ನಲಾದ ವಿಷಯದಲ್ಲಿ ವಿಚಾರಣೆ ನಡೆಸಲು ಸಿಂಡಿಕೇಟ್ ನಿರ್ಣಯಿಸಿ, ವಿಚಾರಣಾಧಿಕಾರಿಗಳನ್ನು ನೇಮಿಸಲು ಸಿಂಡಿಕೇಟ್ ಕುಲಪತಿಗಳಿಗೆ ಅದೀಕರಿಸಿತು

ಮುಂದುವರೆದು ಪರಾಮರ್ಶಿತ ಟಿಪ್ಪಣಿಯಲ್ಲಿ ಮಂಡಿಸಿರುವಂತೆ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳಿಗೆ ಮಾಡಿರುವ ಕೆಲವೊಂದು ಪಾರ್ಮಾಟುಗಳನ್ನು ಅನುಮೋದಿಸಿ, ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಕಾರ್ಯಕ್ಕೆ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಂಡು ಪತ್ರಿಯೊಂದು ಉತ್ತರ ಪತ್ರಿಕೆಯ ಸ್ಕ್ಯಾನಿಂಗ್ ಕಾರ್ಯಕ್ಕೆ ರೂ 1 50ರಂತೆ ಸಂಭಾವನೆ ನೀಡಲು ಸಿಂಡಿಕೇಟ್ ಅನುಮೋದಿಸಿತು

*Proceedings of the 169th meeting of the Syndicate held on 27 07 2023*

ವಿಷಯ ಸಂಖ್ಯೆ 21 2022–23ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 88 (ಎಂಬತ್ತೆಂಟು) ಪಿ ಜಿ ಡಿಪ್ಲೊಮಾ ವಿದ್ಯಾರ್ದಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ ನೀಡುವ ಬಗ್ಗೆ

ಕುಲಪತಿಗಳು ಮಾತನಾಡಿ ಪಿ ಜಿ ಡಿಪ್ಲೊಮಾ ವಿದ್ಯಾರ್ದಿಗಳಿಗೆ ಸರ್ಕಾರದ ಆದೇಶಾನುಸಾರ ಹಾಸ್ಟೆಲ್ ಹಾಗೂ ಇತರ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ ಆದರೆ ಹಿಂದಿನ ವರ್ಷದಲ್ಲಿ ಒಂದು ಬಾರಿಯ ಅವಕಾಶದಂತೆ ಅನುಮತಿ ನೀಡಿ ಹಾಸ್ಟೆಲ್ ಸೌಲಭ್ಯವನ್ನು ನೀಡಿರುವ ಉದಾಹಾರಣೆ ನೀಡಿ ಪ್ರಸ್ತುತ ಪಿ ಜಿ

ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ಪಡೆದ 88 ವಿದ್ಯಾರ್ಥಿಗಳು ತಮಗೂ ಒಂದು ಬಾರಿಯ ಅವಕಾಶದಂತೆ ಹಾಸ್ಟೆಲ್ ಸೌಲಭ್ಯ ನೀಡಬೇಕೆಂದು ಕೋರಿದ್ದಾರೆ ಮುಂದಿನ ವರ್ಷದಿಂದ ಪಿ ಜಿ ಡಿಪ್ಲೊಮಾ ಕೋರ್ಸುಗಳಿಗೆ ಆನ್–ಲೈನ್‌ನಲ್ಲಿ ಮಾತ್ರ ಪಾಠ ಪ್ರವಚನ ನಡೆಸಲು ಅವಕಾಶ ನೀಡಬಹುದಾಗಿದೆ ಹಾಗೂ ವಿಬಾಗದಲ್ಲಿ ತರಗತಿಗಳನ್ನು ನಡೆಸುವುದಿಲ್ಲವೆಂದು ತಿಳಿಸಿದರು

ನಿರ್ಣಯ

ದೀರ್ಘ ಚರ್ಚೆಯ ನಂತರ, ಮುಂದಿನ ಸಾಲಿನಿಂದ ಪಿ ಜಿ ಡಿಪ್ಲೊಮಾ ಕೋರ್ಸುಗಳನ್ನು ಆನ್–ಲೈನ್ ಕೋರ್ಸುಗಳಾಗಿ ಮಾರ್ಪಡಿಸಬೇಕೆಂದು ಸಿಂಡಿಕೇಟ್ ಸೂಚಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು 88 ಪಿ ಜಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ನೀಡಲು ಸಿಂಡಿಕೇಟ್ ಒಂದು ಬಾರಿಯ ಅವಕಾಶದಂತೆ ಅನುಮೋದಿಸಿತು

1 ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಯಾವುದೇ ವಿಬಾಗದಲ್ಲಿ ಸ್ನಾತಕೋತ್ತರ ಪದವಿಗೆ ದಾಖಲಾಗಿ ಅದೇ ಶೈಕ್ಷಣಿಕ ವರ್ಷದಲ್ಲಿ ಪಿ ಜಿ ಡಿಪ್ಲೊಮಾಗೆ ದಾಖಲಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವಿರುವುದಿಲ್ಲ

2 ಈ ಹಿಂದೆ ಯಾವುದೇ ಪಿ ಜಿ ಡಿಪ್ಲೊಮಾಗೆ ಸೇರಿ ಹಾಸ್ಟೆಲ್ ಸೌಲಭ್ಯವನ್ನು ಪಡೆದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ನೀಡುವುದಿಲ್ಲ

3 ಇನ್ನು ಮುಂದೆ ಯಾವುದೇ ಪಿ ಜಿ ಡಿಪ್ಲೊಮಾ ಕೋರ್ಸಿಗೆ ಹಾಸ್ಟೆಲ್ ವ್ಯವಸ್ಥೆ ಇರುವುದಿಲ್ಲ



ವಿಷಯ ಸಂಖ್ಯೆ 22 ಎನ್ ಸಿ ಸಿ ಸಂಸ್ಥೆಗೆ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಬಾರತಿ ಆವರಣದಲ್ಲಿ ಜಾಗವನ್ನು ನೀಡುವ ಕುರಿತು

ನಿರ್ಣಯ

ಚರ್ಚೆಯ ನಂತರ, ಈಗಾಗಲೇ ಎನ್ ಸಿ ಸಿ ಸಂಸ್ಥೆಗೆ ಜ್ಞಾನಬಾರತಿ ಆವರಣದ ನಾಯಂಡಹಳ್ಳಿ ಗ್ರಾಮದ ಸರ್ವೆ ನಂ 71ರಲ್ಲಿ 2 ಎಕರೆ ಜಮೀನು ನೀಡಿರುವುದರಿಂದ ಸದರಿ ಜಾಗದಲ್ಲೇ ಫೈರಿಂಗ್ ರೇಂಜ್ ಮತ್ತು ಅಬ್‌ಸ್ಟಕಲ್ ಕೋರ್ಸು ಟ್ರೈನಿಂಗ್ ಉಪಕರಣಗಳನ್ನು ಅಳವಡಿಸಿಕೊಳ್ಳಲು ಸದರಿ ಸಂಸ್ಥೆಗೆ ಸೂಚಿಸಬೇಕೆಂದು ಹಾಗೂ ಹೆಚ್ಚುವರಿಯಾಗಿ ಮತ್ಯಾವುದೇ ಜಾಗವನ್ನು ಉಪಯೋಗಿಸಿಕೊಳ್ಳಲು ಅವಕಾಶ ನೀಡದಿರಲು ಸಿಂಡಿಕೇಟ್ ನಿರ್ಣಯಿಸಿತು

**Item No 23** No objection for Council of Architecture toward the change of name in the Department of Architecture-reg

***Resolution***

The Syndicate resolved to approve to issue no objection certificate to the Council of Architecture towards the change of University name i e , from *Department of Architecture, UVCE, Bangalore University, JB Campus, Bangalore-56'* to *'Department of Architecture, University of Visvesvaraya College of Engineering, JB Campus, Bangalore-56'*



**Item No 24** To consider the reports of the Selection Committee under UGC-CAS for promotion to the cadre of Professors/Senior Professors under the faculty of Arts & Science as per the Statutes notified on 30 05 2022-reg

The Vice-Chancellor briefed the Syndicate that as per the UGC guidelines and approved Statutes, the applications and publications submitted by the faculty members for promotion from the cadre of Professor to the cadre of Senior Professor under UGC-CAS scheme have been sent to three outside experts, in the concerned subjects The favourable reports received from the experts are placed before the respective Selection Committees In view of retirement of Prof V V Suresh Babu, Dept of Chemistry and Prof Shaik Masthan, Dept of History on 31-07-2023, the proceedings of the Selection Committee in respect of Chemistry and History may be considered by the Syndicate With the consent of the members the sealed covers containing the proceedings of the Selection Committee meetings held on 13 07-2023 and 26-07-2023 are opened and placed before the Syndicate

At this juncture Mr Udaya Kumar M, sought to know about the date of effecting the promotion and payment of arrears of salary He said that the monitory benefits should be sanctioned prospectively i e from the date of issue of the promotion orders

The Registrar (Evaluation) informed that the promotion under CAS and payment of arrears of salary would be from the date of eligibility as per UGC guidelines.

The Registrar explained the practice/rule as has been followed in the Government. The new pay in the promoted cadre would be sanctioned with effect from the date of issue of promotion orders.

The Finance Officer, opined that the concerned UGC guidelines and Government order have to be looked into while sanctioning arrears for the teachers to be promoted to the cadre of Senior Professors. The rule followed by the other Universities in this regard will also be obtained.

***Resolution:***

After detailed discussion, the Syndicate resolved to approve the proceedings of the following Selection Committees for promotion from the cadre of Professor to the cadre of Senior Professor (Stage 14 to 15) and from Associate Professor to Professor (Stage 13A to 14), under the faculty of Arts & Science as per the Statutes notified on 30.05.2022.

**I. Selection Committee in Chemistry held on 13-07-2023 at 11.00 am.**

*"The Selection Committee assessed the candidate based on the interaction with the candidate, 10 best publications during the last 10 years by the candidate, research, academic achievements and favourable review reports from three experts in respect of publications and research work of the above candidate, as per the Statutes related to promotion of Academic Staff of Bangalore University under the Career Advancement Scheme (assented by the Chancellor on 23.05.2022) (7th CPC of UGC), recommends for promotion of Prof. V.V. Suresh Babu, Department of Chemistry, Bangalore University from* ***Professor (Academic level 14) to Senior Professor (Academic level 15)*** *under CAS with effect from 16th March 2019 i.e. from the date of Government Order vide No.* ***ED 483 UNE 2017, BENGALURU, DATED 16.03.2019."***

**II. Selection Committee in Chemistry held on 13-07-2023 at 12.30 pm.**

*"Therefore, the Selection Committee recommends* ***Dr. Shivaraj Y,*** *for promotion from* ***Associate Professor (Academic level 13A) to Professor (Academic level 14)*** *under Career Advancement Scheme of UGC with effect from the date of fulfilling the required eligibility , i.e. from 31st January, 2023."*

III **Selection Committee in History held on 26 07-2023 at 11 00 am**

*"The Selection Committee assessed the candidates based on the interaction with the candidates, 10 best publications during the assessment period by the candidates, research, academic achievements and favourable review reports from three experts in respect of publications and research work of the above candidates as per the Statutes related to promotion of Academic Staff of Bangalore University under the Career Advancement Scheme (assented by the Chancellor on 23 05 2022) (7th CPC of UGC), recommends for promotion of the following faculty members of the Department of History, Bangalore University from **Professor (Academic level 14) to Senior Professor (Academic level 15)** under CAS with effect from the dates as shown against their names*

| | | | |
|---|---|---|---|
| *1* | *Prof K S Vijayalakshmi* | - | *16 03 2019* |
| *2* | *Prof M V Ushadevi* | - | *24 12 2019* |
| *3* | *Prof S Nagarathnamma* | - | *24 12 2019* |
| *4* | *Prof Sheik Mastan* | - | *24 12 2019"* |

The promotion orders should be issued to the above teachers immediately

Further, the Syndicate resolved that the opinion of the Finance Officer and the Legal Advisor should be obtained with regard to payment of arrears to the above teachers promoted under CAS with effect from the dates as recommended in the Selection Committee proceedings



**Item No 25** Dr S Ramakrishna, Professor, Dept of Zoology, BUB requesting for VRS (Voluntary Retirement from Service) from Bangalore University service

***Resolution***

The Syndicate resolved to consider the request of Dr S Ramakrishna, Professor, Dept of Zoology, to take VRS (Voluntary Retirement from Service) from Bangalore University service as per the KCSR s Rule 285(1) The date of effect of his retirement shall be from the issue of order from the University after obtaining opinion from the Legal Advisor and the Finance Officer In the matter

**Item No. 26:** To Consider the report of the Local Inquiry Committee with regard to the petitioner colleges in W.P. No.11433/2023 for the year 2023-24 including UG and PG courses-reg.

Dr. K.A. Maheshwaraih informed that the Academic Council and the Syndicate have already approved the recommendation of the Local Inquiry Committee for sanction of affiliation to UG courses at VIDHYA SHEKHAR INSTITUTION OF MANAGEMENT STUDIES in its earlier meetings by limiting 120 seats to BCA course. The Syndicte has to approve the recommendations of the Committee inrespect of MBA course. Further, he informed that the Local InquiryCommitte under the Chairmanship of Prof. Suresh V Nadagoudar has recommended for sanction of 120 seats to MBA course at BANGALORE INTEGRATED MANAGEMENT ACADEMY. However, the AICTE has approved for 180 seats. He insisted to approve for 180 seats to MBA course at BANGALORE INTEGRATED MANAGEMENT ACADEMY.

The Registrar(Evaluation) expressed that the Syndicate in its earlier meeting recommended to limit the seats for 120 seats. Therefore, the MBA seats at BANGALORE INTEGRATED MANAGEMENT ACADEMY may be limited to 120 seats. The recommendation of the Local Inquiry Committee is in order.

***Resolution:***

The Syndicate resolved to approve the recommendations of the Local Inquiry Committees in respect of VIDHYA SHEKHAR INSTITUTION OF MANAGEMENT STUDIES and BANGALORE INTEGRATED MANAGEMENT ACADEMY who were the petitoners in W.P. No.11433/2023.

**GENERAL DISCUSSION: -**

1. ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಪ್ರಾರಂಭಿಸಿರುವ ನಾಲ್ಕು ವರ್ಷದ ಹಾನರ್ಸ್ ಕೋರ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರುಗಳು ವಾರಕ್ಕೆ ಒಂದು ಗಂಟೆ ಬೋಧನಾ ಕಾರ್ಯ ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದು ಎಂದು ತಿಳಿಸಿದರು. ಅವರು ಮುಂದುವರೆದು,

ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಲ್ಲಿ ಯು.ಜಿ.ಸಿ. ಎನ್.ಇ.ಟಿ/ಜೆ.ಆರ್.ಎಫ್. ಪರೀಕ್ಷೆಗೆ ತಯಾರಿ ನಡೆಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕೆಂದು ಸಲಹೆ ನೀಡಿದರು.

ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ಎಲ್ಲಾ ಪ್ರಾಧ್ಯಾಪಕರು ವಾರಕ್ಕೆ ಒಂದು ಗಂಟೆಯ ಅವಧಿಯಷ್ಟಾದರೂ ಹಾನರ್ಸ್ ಕೋರ್ಸಿನ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಬೋಧನೆಯನ್ನು ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. ಪ್ರಾಧ್ಯಾಪಕರು ಸದರಿ ಹಾನರ್ಸ್ ಕೋರ್ಸಿನಲ್ಲಿ ತಮ್ಮ ಪರಿಣಿತಿ ವಿಷಯ ಇಲ್ಲದಿದ್ದರೆ, ಸದರಿ ವಿದ್ಯಾರ್ಥಿಗಳೊಂದಿಗೆ ವಾರಕ್ಕೆ ಒಂದು ಗಂಟೆಯ ಕಾಲ ಸಮಾಲೋಚನಾ ಪ್ರವಚನ/ಬೋಧನಾ ಕಾರ್ಯವನ್ನು ಮಾಡಬೇಕೆಂದು ಸಿಂಡಿಕೇಟ್ ಸೂಚಿಸಿ, ಈ ಬಗ್ಗೆ ಕೂಡಲೇ ಒಂದು ಸುತ್ತೋಲೆಯನ್ನು ಹೊರಡಿಸಬೇಕೆಂದು ನಿರ್ಣಯಿಸಿತು.

2. ಜೆ.ಆರ್.ಎಫ್. ಫೆಲೋಷಿಪ್ ಪಡೆದಿರುವ ವಿದ್ಯಾರ್ಥಿಗಳು ಸಲ್ಲಿಸಿದ ಮನವಿಯ ಕುರಿತು ಕುಲಪತಿಗಳು ಮಾತನಾಡಿ, ಈಗಾಗಲೇ 181 ಸಂಶೋಧನಾ ವಿದ್ಯಾರ್ಥಿಗಳಿಗೆ ಆಪ್ಪಲ್ ಲ್ಯಾಪ್‌ಟಾಪ್ ಅನ್ನು ಟೆಂಡರ್ ಮುಖಾಂತರ ಖರೀದಿಸಲಾಗಿದೆ. ವಿಶ್ವವಿದ್ಯಾಲಯದ ವತಿಯಿಂದ ಫೆಲೋಷಿಪ್ ಪಡೆಯುತ್ತಿರುವ ವಿದ್ಯಾರ್ಥಿಗಳ ಪೈಕಿ ಯು.ವಿ.ಸಿ.ಇ. ಸೇರಿದ ವಿದ್ಯಾರ್ಥಿಗಳಿಗೆ ಪ್ರಸ್ತುತ ವಿಶ್ವವಿದ್ಯಾಲಯದಿಂದ ಫೆಲೋಷಿಪ್ ನೀಡುತ್ತಿಲ್ಲವಾದ್ದರಿಂದ ಹಾಗೂ ಯುವಿಸಿಇ ವಿಶ್ವವಿದ್ಯಾಲಯವೇ ಸದರಿ ವಿದ್ಯಾರ್ಥಿಗಳಿಗೆ ಫೆಲೋಷಿಪ್ ನೀಡಬೇಕೆಂದು ತಿಳಿಸಿರುವುದರಿಂದ ಅಂತಹ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಅವಶ್ಯಕತೆ ಇರುವುದಿಲ್ಲ. ಕಾರಣ, 2022-23ನೇ ಸಾಲಿನಿಂದ ಎಲ್ಲಾ ಶುಲ್ಕವನ್ನು ಯುವಿಸಿಇ ವಿಶ್ವವಿದ್ಯಾಲಯವೇ ಪಡೆಯುತ್ತಿದೆ. ಇದರಿಂದಾಗಿ ಲ್ಯಾಪ್‌ಟಾಪ್‌ಗಳು ಉಳಿಯುವುದರಿಂದ ಜೆ.ಆರ್.ಎಫ್. ವಿದ್ಯಾರ್ಥಿಗಳಿಗೆ ನೀಡುವ ಬಗ್ಗೆ ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಚರ್ಚೆಯ ನಂತರ ಯು.ಜಿ.ಸಿ.ಇಂದ ಜೆ.ಆರ್.ಎಫ್. ಫೆಲೋಷಿಪ್ ಪಡೆಯುತ್ತಿರುವ 16 ಸಂಶೋಧನಾ ವಿದ್ಯಾರ್ಥಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಲ್ಯಾಪ್‌ಟಾಪ್ ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. ಪ್ರಸ್ತುತ ಖರೀದಿಯಲ್ಲಿ ಲ್ಯಾಪ್‌ಟಾಪ್ ಕೊರತೆ ಬಂದಲ್ಲಿ ಕೂಡಲೇ ಈಗಾಗಲೇ ನಿಗದಿಪಡಿಸಿದ ದರದಲ್ಲಿ ಅಗತ್ಯ ಸಂಖ್ಯೆಯ ಲ್ಯಾಪ್‌ಟಾಪ್ ಖರೀದಿಸಿ ಸದರಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಒದಗಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

3. ಪ್ರೊ. ವಿ. ಸುರೇಶ್ ಬಾಬು ಅವರು ಮಾತನಾಡಿ, ವಿಶ್ವವಿದ್ಯಾಲಯದ ಅಭಿವೃದ್ಧಿ ವಿಭಾಗದಿಂದ ಪ್ರಾಜೆಕ್ಟ್ ಗ್ರಾಂಟ್ಸ್ ಬಿಡುಗಡೆ ಮಾಡಲು ವಿಳಂಬವಾಗುತ್ತಿದೆ. ಇದರಿಂದಾಗಿ ಸಂಶೋಧಕರಿಗೆ ತೊಂದರೆಯಾಗುವುದರಿಂದ, ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕಡತಗಳು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡುವ ಬಗ್ಗೆ ಈ-ಆಫೀಸ್ ಅಳವಡಿಕೆ ಹಾಗೂ ಇತರ ಕ್ರಮಗಳನ್ನು ಕೈಗೊಂಡು ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎಂದು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಯವರು |

//ಪ್ರತಿ//

ಕುಲಸಚಿವರು